ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
*ಪೋಸ್ಟ್‌ಮ್ಯಾನ್ ಸಹ ಕಾಗದ ಬರೆಯುವುದನ್ನು ಕಡಿಮೆ ಮಾಡಿಬಿಟ್ಟಿದ್ದಾನಲ್ಲ?*



ವರ್ಣಮಾಲೆಗೆ ಸಂದ ಗೌರವ. ಆ ಆದಮೇಲೆ ಈ ಬರಲೇಬೇಕಲ್ಲ; ಹಾಗೆಯೇ ಆ ಮೇಯ್ಲ್ ಕಾಲದ ನಂತರ ಈಮೇಯ್ಲ್!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ರುಚಿಕಟ್ಟಾದ ಅಡುಗೆಗೆ ನಳಪಾಕ, ಭೀಮಪಾಕ ಎನ್ನದೆ ಸೀತಾಪಾಕ, ದ್ರೌಪದಿ ಪಾಕ ಎಂದೇಕೆ ಹೇಳುವುದಿಲ್ಲ?*
ಏಕೆಂದರೆ ಸೀತೆ ಅಡಿಗೆ ಮಾಡಿದ ದಾಖಲೆಯಿಲ್ಲ; ದ್ರೌಪದಿಯಂತೂ ಅಕ್ಷಯ ಕೇಟರರ್ಸ್‌ನಿಂದ ಊಟ ತರಿಸುತ್ತಿದ್ದದ್ದು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನೀವು ಚುನಾವಣೆಗೆ ನಿಂತರೆ ನಾವೆಲ್ಲಾ ನಿಮಗೇ ಓಟು ಕೊಡುತ್ತೇವೆ. ಏನಂತೀರಿ ರಾಂ?*
ನಿಮ್ಮ ದೃಷ್ಟಿಯಲ್ಲಿ ನಾನು ಚುನಾವಣಾ ಅಭ್ಯರ್ಥಿಯಾಗುವ ಮಟ್ಟಕ್ಕೆ ದುಷ್ಟನಾಗಿರುವೆನಲ್ಲ ಎಂದು ದುಃಖಿಸುತ್ತೇನೆ.

ಜಾಕೋಬ್ ಡಿಸೋಜ, ಕುರುವಳ್ಳಿ
*ಗಾಢವಾದ ಪ್ರೀತಿ ಹೇಗಿರುತ್ತೆ?*




ಗೂಢವಾಗಿ.

ವಿ. ಹೇಮಂತಕುಮಾರ, ಬೆಂಗಳೂರು
*ಈ ಹೃದಯದ ಭಾರ ನೀಗಿಸು ಬಾರಾ ಎಂದು ಸಂದೇಶ ಕಳಿಸಿದ್ದಾಳಲ್ಲಾ...?*
ಕನಸು ಕಾಣಬೇಡಿ. 'ಕೊಲ್ಡ್ ಹೆಚ್ಚಾಗಿ ಚೆಸ್ಟ್ ಕಂಜೆಷನ್ ಆಗಿದೆ. ಮಾತ್ರೆ ತಂದ್ಕೊಡು' ಅಂತ ಅರ್ಥವಷ್ಟೆ.

ದೇವೇಂದ್ರ, ಕಡೂರು
*ಹಣವಂತನಿಗೆ ನಿದ್ರೆ ಕಡಿಮೆಯಂತಲ್ಲ...?*
ಹೌದು. ತನ್ನ ಸೆಕ್ಯುರಿಟಿ ಗಾರ್ಡ್‌ಗಳೆಲ್ಲ ಎಚ್ಚರವಾಗಿರುವರೇ ಎಂದು ಆಗಾಗ್ಗೆ ಎದ್ದುನೋಡಬೇಕಲ್ಲ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ರೆಸಾರ್ಟ್ ರಾಜಕೀಯ ಎಂದರೇನು?*
ಬಂಡಲ್ ಬಿಡುವ ಮಂದಿಯನ್ನು ಬಂಡಲ್ ಮಾಡಿಕೊಂಡು ಹೋಗಿ ಬಂಡಲ್ ನೀಡಿ ಒಲಿಸಿಕೊಳ್ಳುವುದು.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಸತ್ತವರಿಗೆ ಮೇಲೆ ಹೋದರು ಎನ್ನುವರಲ್ಲ, ಏಕೆ?*
ಚಿಂತೆ, ನೋವುಗಳಿಲ್ಲದೆ ಹಗುರವಾಗುವರಲ್ಲ! ಹಗುರವಾದದ್ದು ಹೋಗುವುದೇ ಮೇಲೆ.

ಸುಶೀಲಾ ಬಿ. ರಾಮಣ್ಣ, ಬೆಂಗಳೂರು
*ಒಂದು-ಎರಡು ಬಾಳೆಲೆ ಹರಡು ಎಂದರೆ ಮೂರು-ನಾಕು ಸುಮ್ನಿರು ಸಾಕು ಎನ್ನುವಳಲ್ಲ ಮೊಮ್ಮಗಳು...?*
'ಐದು- ಆರು ಚಾಕ್ಲೇಟ್ ಬಾರು' ಅನ್ನಿ; 'ಏಲೂ-ಎಂಟೂ ತಿನ್ನಿಚು ಕುಂತು' ಎನ್ನುತ್ತಾ ಮುದ್ದಾಗಿ ಬಳಿ ಬರುತ್ತಾಳೆ.

ಎಚ್.ಆರ್. ದೇಸಾಯಿ, ರಾಯಚೂರು
*ಆಟಗಳಲ್ಲಿ ಗೆದ್ದ ಭಾರತೀಯರು ರಾಷ್ಟ್ರಧ್ವಜ ಹಿಡಿದು ಓಡುತ್ತಾ ಸಂಭ್ರಮಿಸುತ್ತಾರೆ. ಚುನಾವಣೆ ಗೆದ್ದ ರಾಜಕಾರಣಿಗಳು?*
ರಾಷ್ಟ್ರವನ್ನೇ ಕೈಯಲ್ಲಿ ಹಿಡಿದು ವಿದೇಶಿ ಬ್ಯಾಂಕ್‌ಗಳತ್ತ ಓಡುತ್ತಾ ಸಂಭ್ರಮಿಸುತ್ತಾರೆ.

ಆರ್. ಮಧುಸೂದನ್, ಹಾಸನ
*ಎಲ್ಲ ಜಾತಿಯವರನ್ನೂ ಕಚ್ಚುವ ಸೊಳ್ಳೆ ಯಾವ ಜಾತಿ?*
ಚಚ್ಚಿಬಿಡಬೇಕು ಎನಿಸುವ ಮಟ್ಟಕ್ಕೆ ಕೆರಳಿಸಿ ಕಚ್ಚುವುದರಿಂದ ಬುದ್ಧಿಜೀವಿಗಳ ಜಾತಿ.

ಎ.ಪಿ. ವಿರೂಪಾಕ್ಷ, ಬೆಂಗಳೂರು
*ಸಂಸದರು, ಶಾಸಕರು ಪ್ರಜಾಸೇವೆ ಮಾಡುವಾಗ ಅವರ ಮಕ್ಕಳು ಯೋಧರಾಗಿ ದೇಶಸೇವೆ ಮಾಡಬಹುದಲ್ಲವೆ?*
ಆಗದು. ಕೋಟೆ ಕಾಯುವುದಕ್ಕಿಂತ ಕಷ್ಟಕರವಾದ ಕೋಟೆಗಳನ್ನು ಕಾಯಲೆಂದು ಇಲ್ಲಿ ಅವರ ಅವಶ್ಯಕತೆಯಿರುತ್ತದೆ.

## ಬಹುಮಾನಿತ ಪ್ರಶ್ನೆ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಮಹಾಭಾರತಕ್ಕೂ, ರಾಮಾಯಣಕ್ಕೂ ಏನು ವ್ಯತ್ಯಾಸ?*
ರಾಮಾಯಣದ ಕಪಿಗಳಿಗೆ ಮಾನವೀಯತೆ ಇತ್ತು; ಮಹಾಭಾರತದ ಮನುಜರಿಗೆ ಕೋತಿಬುದ್ಧಿ ಇತ್ತು.

ಕುಮಾರ ಚಲವಾದಿ, ಹೊಳನರಸಿಪುರ
*ರಾಮ-ಲಕ್ಷ್ಮಣರಂತಹ ಅಣ್ಣ-ತಮ್ಮಂದಿರು ವಾಲಿ-ಸುಗ್ರೀವರಂತೆ ಆಗುವುದು ಯಾವಾಗ?*
ಹೊಂದಾಣಿಕೆ ಕಿಷ್ಕಿಂಧೆ ಆದಾಗ.

ವಿ.ಎಸ್. ಹಿಂದೂಪುರ, ಬಳ್ಳಾರಿ
*ಮಳೆಯನ್ನು ಮಳೆರಾಯ, ವರುಣ ಎಂದು ಪುಲ್ಲಿಂಗಕ್ಕೆ ಹೋಲಿಸಲು ಕಾರಣವೇನು?*
ಎತ್ತರದಿಂದ ಧುಮುಕುವುದು, ಸಂದಿಗೊಂದಿಗಳಲ್ಲಿ ಓಡುವುದು, ಹಳ್ಳ ಸೇರುವುದು ಎಲ್ಲ ಗಂಡಿನ ಲಕ್ಷಣಗಳೇ ಆದ್ದರಿಂದ.

ಹೆಚ್.ಎಮ್. ಅನಂತಪದ್ಮನಾಭ, ಮೈಸೂರು
*ಕಳ್ಳ- ಪೊಲೀಸ್ ಸಮಾನಾರ್ಥಕ ಪದವೋ, ವಿರುದ್ಧಾರ್ಥಕ ಪದವೋ?*



ವೃತ್ತಿಯಲ್ಲಿ ವಿರುದ್ಧಾರ್ಥಕ; ಪ್ರವೃತ್ತಿಯಲ್ಲಿ, ಹಲವೆಡೆ, ಸಮಾನಾರ್ಥಕ.

ತಲಕಾಡು ಶ್ರೀನಿಧಿ, ಬೆಂಗಳೂರು
*'ಬಂದೇರೀ... ಒಂದ್ನಿಮಿಷ' ಎಂದಾಗ ಆ ನಿಮಿಷದ ವ್ಯಾಪ್ತಿ ಎಷ್ಟು ಸಾರ್?*
ಕಾಯುವವರ ತಾಳ್ಮೆ ಮೀರಿ, ಅಸಹಾಯಕತೆ ಮೂಡಿ, ಮೈ ಪರಚಿಕೊಳ್ಳುವಂತಾಗುವ ಅವಧಿಯಷ್ಟು.

ಪಿ.ಜೆ. ರಾಘವೇಂದ್ರ, ಮೈಸೂರು
*ಈಗಿನ ಯುವಕರು ಗಡ್ಡ ಬಿಡುವುದೇಕೆ?*
ನಾವು ಅಷ್ಟು ಸುಲಭವಾಗಿ ಬೋಳಿಸಿಕೊಳ್ಳುವವರಲ್ಲ ಎಂದು ಚಂಚಲೆಯರಿಗೆ ಸೂಚಿಸಲಂತೆ.

■ ರಾಮ್